# ಮಕ್ಕಳ ವಿಶೇಷ ಪೊಲೀಸ್ ಘಟಕ, ಮೈಸೂರು ನಗರ.

ಬಾಲ ನ್ಯಾಯ (ಮಕ್ಕಳ ಪಾಲನೆ–ಪೋಷಣೆ & ರಕ್ಷಣೆ) ಕಾಯ್ದೆ–2000 ಹಾಗೂ ತಿದ್ದುಪಡಿ–2009 ರ ಕಲಂ–63 ರಂತೆ ಕರ್ನಾಟಕ ಸರ್ಕಾರ, ಗೃಹ ಇಲಾಖೆಯ ನಡಾವಳಿ & ಆದೇಶ ಸಂ: ಹೆಚ್.ಡಿ. 393 ಪಿಸಿಸಿ 2011, ಬೆಂಗಳೂರು, ದಿನಾಂಕ: 31.01.2012 ರಂತೆ, ಮೈಸೂರು ನಗರದ ಲಷ್ಕರ್ ಪೊಲೀಸ್ ಠಾಣಾ ಕಟ್ಟಡದ ಮಹಡಿಯಲ್ಲಿ ದಿನಾಂಕ: 05.09.2012 ರಿಂದ ಮಕ್ಕಳ ವಿಶೇಷ ಪೊಲೀಸ್ ಘಟಕ ಕರ್ತವ್ಯ ನಿರ್ವಹಿಸುತ್ತಿದ್ದು, ನಂತರ ಮಾನ್ಯ ಪೊಲೀಸ್ ಆಯುಕ್ತರ ಆದೇಶದಂತೆ ದಿನಾಂಕ: 15.07.2015 ರಂದು ಮಕ್ಕಳ ವಿಶೇಷ ಪೊಲೀಸ್ ಘಟಕವು ಲಷ್ಕರ್ ಪೊಲೀಸ್ ಠಾಣಾ ಕಟ್ಟಡದ ಕೆಳ ಮಹಡಿಗೆ ಸ್ಥಳಾಂತರಗೊಂಡು, ದಿನಾಂಕ: 14.11.2015 ರ 'ಮಕ್ಕಳ ದಿನಾಚರಣೆ' ದಿನದಂದು ಸದರಿ ಘಟಕದ ಹಿಂಭಾಗದ 80*60 ಅಡಿ ಅಳತೆಯ ಖಾಲಿ ಜಾಗದಲ್ಲಿ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಯೋಗದೊಂದಿಗೆ ಬಾಲ ನ್ಯಾಯ ಕಾಯ್ದೆ ಆದರ್ಶದಂತೆ ಹೊಸದಾಗಿ ನಿರ್ಮಿಸಿರುವ ಮಕ್ಕಳ ವಿಶೇಷ ಪೊಲೀಸ್ ಘಟಕದ 'ಮಕ್ಕಳ ಸ್ನೇಹಿ ವಾತಾವರಣದ' ಉದ್ಘಾಟನೆಯಾಗಿರುತ್ತದೆ.

ಸದರಿ ಘಟಕದ ನೋಡಲ್ ಅಧಿಕಾರಿಯವರು ಮಾನ್ಯ ಉಪ ಪೊಲೀಸ್ ಆಯುಕ್ತರು, ಅಪರಾಧ & ಸಂಚಾರ, ಮೈಸೂರು ನಗರ ರವರಾಗಿದ್ದು, ಇವರ ಅಧೀನದಲ್ಲಿ ಮೈಸೂರು ನಗರ ಅಪರಾಧ ವಿಭಾಗದ ಎಸಿಪಿಯವರು ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಯಾಗಿರುತ್ತಾರೆ. ಇವರಿಗೆ ಅಧೀನದಲ್ಲಿ ಪೊಲೀಸ್ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ ಪ್ರತಿ ಪೊಲೀಸ್ ಠಾಣೆಯಲ್ಲಿ ನೇಮಕವಾಗಿರುವ ಒಬ್ಬರು ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು (ಪಿ.ಎಸ್.ಐ ಕಾನೂನು & ಸುವ್ಯವಸ್ಥೆ) ಹಾಗೂ ಇಬ್ಬರು ಸಹಾಯಕ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು (ಒಬ್ಬರು ಮಹಿಳೆ ಮತ್ತು ಒಬ್ಬರು ಪುರುಷ ಸಿಬ್ಬಂದಿ) ಈ ಘಟಕದ ಭಾಗವಾಗಿ ಆಯಾಯ ಠಾಣೆಗಳಲ್ಲಿ ವರದಿಯಾಗುವ ಮಕ್ಕಳ ಪ್ರಕರಣಗಳ ನಿರ್ವಹಣೆ ಮಾಡುತ್ತಾರೆ.

**1.** ಎಸ್.ಜೆ.ಪಿ.ಯು ಘಟಕದಲ್ಲಿರುವ 'ಮಕ್ಕಳ ಸ್ನೇಹಿ ವಾತಾವರಣದ' ಭಾವಚಿತ್ರಗಳು





ಮಕ್ಕಳ ವಿಶೇಷ ಪೊಲೀಸ್ ಘಟಕ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಸುಮಾರು 1,256 ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲಾಗಿರುತ್ತೆ. ಈ ಘಟಕದಲ್ಲಿ 18 ವರ್ಷದೊಳಗಿನ ಮಕ್ಕಳಿಗೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದವರು, ಪಾಲನೆ– ಪೋಷಣೆ, ರಕ್ಷಣೆ ಬೇಕಾದ ಮಕ್ಕಳು, ಬಾಲ್ಯ ವಿವಾಹ, ಬಾಲ ಕಾರ್ಮಿಕ, ಭಿಕ್ಷಾಟನೆಗೆ ಒಳಗಾದವರು ಹಾಗೂ ಪೋಕ್ಸೋ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಆಪ್ತಸಮಾಲೋಚನೆ ಕೊಡಿಸುವುದು ಹಾಗೂ ಸದರಿ ಮಕ್ಕಳನ್ನು ಅನುಸರಣೆ ಮಾಡುವುದಾಗಿರುತ್ತೆ. ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚೈಲ್ಡ್ ಹೆಲ್ಪ್ ಲೈನ್–1098, ಇತರೆ ಇಲಾಖೆ & ವಿವಿಧ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಮಕ್ಕಳ ರಕ್ಷಣಾ ಕಾರ್ಯಾಚರಣೆ ಮತ್ತು ಮಕ್ಕಳ ಹಕ್ಕುಗಳ ಕುರಿತಂತೆ ಜಾಗೃತಿ ಕಾರ್ಯಕ್ರಮಗಳನ್ನು ನೆರವೇರಿಸಲಾಗುತ್ತಿದೆ.



ಈ ಘಟಕದಲ್ಲಿ 'ತೆರೆದ ಮನೆ' ಕಾರ್ಯಕ್ರಮದಡಿಯಲ್ಲಿ ಹಲವಾರು ಶಾಲಾ–ಕಾಲೇಜುಗಳ ಮಕ್ಕಳಿಗೆ 'ಮಕ್ಕಳ ಹಕ್ಕುಗಳು – ಕಾನೂನುಗಳು' ಈ ಕುರಿತು ಹಾಗೂ ಅನೇಕ ಮಹಿಳೆಯರು ಮತ್ತು ಸಂಘ–ಸಂಸ್ಥೆಗಳ ಪ್ರತಿನಿಧಿಗಳಿಗೆ ಮಹಿಳಾ ದೌರ್ಜನ್ಯ ತಡೆಯುವಲ್ಲಿ ಇರುವ ಕಾನೂನುಗಳು, ಪೊಲೀಸ್ ಇಲಾಖೆಯ ಕ್ರಮಗಳು, ಸರ್ಕಾರದಿಂದ ಇರುವ ವ್ಯವಸ್ಥೆಗಳು, ಪರಿಹಾರೋಪಾಯಗಳ ಬಗ್ಗೆ ಅನೇಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಮಾಹಿತಿ ನೀಡುವಲ್ಲಿ ಕಾರ್ಯೋನ್ಮುಖವಾಗಿರುತ್ತೆ.



ಈ ಘಟಕದ ಸಿಬ್ಬಂದಿಗಳು ಮಕ್ಕಳ ಪ್ರಕರಣಗಳ ನಿರ್ವಹಣೆಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯವರೊಂದಿಗೆ ಸಮನ್ವಯತೆ ಸಾಧಿಸುವುದು ಹಾಗೂ ವಾರದಲ್ಲಿ ನಡೆಯುವ "ಮಕ್ಕಳ ಕಲ್ಯಾಣ ಸಮಿತಿಯ" ಹಾಗೂ "ಬಾಲ ನ್ಯಾಯ ಮಂಡಳಿ"ಯ ಪ್ರತಿ 2 ಸಭೆಗಳಲ್ಲಿ ಭಾಗವಹಿಸಿ, ಸಹಭಾಗಿತ್ವದೊಂದಿಗೆ ಮಕ್ಕಳ ಪ್ರಕರಣಗಳ ನಿರ್ವಹಣೆಗೆ ಪೊಲೀಸ್ ಇಲಾಖೆಯ ಸಹಕಾರವನ್ನು ನೀಡುತ್ತಿರುತ್ತಾರೆ.

ಮಾನ್ಯ ಎಡಿಜಿಪಿ, ತರಬೇತಿ ಸಾಹೇಬರ ಕಛೇರಿಯ ಸಂದೇಶದಂತೆ "ಲಿಂಗ ಸಂವೇದನಾಶೀಲತೆ & ಜನಸ್ನೇಹಿ ಪೊಲೀಸ್"

ಯೋಜನೆಯಡಿಯಲ್ಲಿ ಸೇವಾ ನಿರತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮಹಿಳಾ–ಮಕ್ಕಳ ಹಕ್ಕುಗಳು, ಕಾನೂನು ಪ್ರಕ್ರಿಯೆ–ಕ್ರಮಗಳ ಕುರಿತು ಕಾರ್ಯಾಗಾರಗಳ ಆಯೋಜನೆ, ನಿರ್ವಹಣೆ ಹಾಗೂ ಮಕ್ಕಳ ವಿಶೇಷ ಪೊಲೀಸ್ ಘಟಕದ ಪರಾಮರ್ಶನಾ ಸಭೆಗಳನ್ನು ಕಾಲ–ಕಾಲಕ್ಕೆ ಆಯೋಜಿಸಿ–ನಿರ್ವಹಣೆ ಮಾಡಲಾಗುತ್ತಿದೆ.

ಮೈಸೂರು ನಗರದ ಮಕ್ಕಳ ವಿಶೇಷ ಪೊಲೀಸ್ ಘಟಕಕ್ಕೆ ಇಲ್ಲಿಯವರೆಗೆ ವಿವಿಧ ರಾಜ್ಯಗಳಿಂದ, ದೇಶಗಳಿಂದ (ಜರ್ಮನ್ & ಹಾಲೆಂಡ್) ಹಾಗೂ ದೆಹಲಿಯ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಬೆಂಗಳೂರಿನ ರಾಜ್ಯ ಮಕ್ಕಳ ಹಕ್ಕುಗಳ ಆಯೋಗದಿಂದ ಅನೇಕ ಪ್ರತಿನಿಧಿಗಳು ಭೇಟಿ ಕೊಟ್ಟು, ಇದೊಂದು ಪೊಲೀಸ್ ಇಲಾಖೆಯಲ್ಲಿ ಮಾದರಿ ಘಟಕವೆಂದು ಅಭಿಪ್ರಾಯ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. 2017 ನೇ ಸಾಲಿನ ನವೆಂಬರ್ ತಿಂಗಳಿನಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ನಡೆಯುವ "ಮಕ್ಕಳ ಹಬ್ಬ" ಎಂಬ ಕಾರ್ಯಕ್ರಮದಲ್ಲಿ ಮಹಿಳಾ & ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯದಲ್ಲಿಯೇ ಪ್ರಪ್ರಥಮ ಬಾರಿಗೆ 'ಮಕ್ಕಳ ಸ್ನೇಹಿ ವಾತಾವರಣ' ವನ್ನು ಹೊಂದಿರುವ ಮಾದರಿ ಘಟಕ ಎಂದು ಅಭಿನಂದನಾ ಪತ್ರ ನೀಡಲಾಗಿರುತ್ತದೆ.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನವದೆಹಲಿ ಇವರು "ಮಕ್ಕಳ ಸ್ನೇಹಿ ಪೊಲೀಸ್ ಠಾಣೆಗಳನ್ನು ದೇಶಾದ್ಯಂತ ಸ್ಥಾಪನೆ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು" 2017 ರಲ್ಲಿ ಹೊರಡಿಸಿದ್ದು, ಸದರಿ ಪುಸ್ತಿಕೆಯ ಪುಟ 27 ರಲ್ಲಿ ಮೈಸೂರು ನಗರ ಮಕ್ಕಳ ವಿಶೇಷ ಪೊಲೀಸ್ ಘಟಕದ ಮಾದರಿ ಬಗ್ಗೆ ಪ್ರಸ್ತಾಪಿಸಿರುವುದು ರಾಷ್ಟ್ರಮಟ್ಟದಲ್ಲಿ ಒಂದು ಶ್ಲಾಘನೀಯ ವಿಷಯವಾಗಿರುತ್ತದೆ ಹಾಗೂ ಮೈಸೂರು ನಗರ ಪೊಲೀಸ್ ವ್ಯವಸ್ಥೆಯ ಹೆಮ್ಮೆ ಎನಿಸುತ್ತದೆ.





**2. ಎಸ್.ಜೆ.ಪಿ.ಯು ಘಟಕದಲ್ಲಿ “ತೆರೆದ ಮನೆ ಕಾರ್ಯಕ್ರಮದ” ಭಾವಚಿತ್ರಗಳು:**













**3. ಎಸ್.ಜೆ.ಪಿ.ಯು ಘಟಕದಿಂದ "ಇನ್ ಹೌಸ್ ಪ್ರೋಗ್ರಾಮ್"ನ ಭಾವಚಿತ್ರಗಳು:**







**4. ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿರುವ ಎಸ್.ಜೆ.ಪಿ.ಯು ಘಟಕದ ಸ್ಟಾಲ್‌ನ ಭಾವಚಿತ್ರ:**






**5.** <u>**ಜರ್ಮನಿಯ ಪೊಲೀಸ್ ಇಲಾಖೆಯವರು ಎಜ್.ಜೆ.ಪಿ.ಯು ಘಟಕಕ್ಕೆ ಬೇಟಿ ನೀಡಿದ ಸಂದರ್ಭ.**</u>





**6.** **ಎನ್‌ಸಿ.ಪಿ.ಆರ್, ನವ ದೆಹಲಿ ರವರು "ಮಕ್ಕಳ ಸ್ನೇಹಿ ಪೊಲೀಸ್ ಠಾಣೆಗಳನ್ನು ದೇಶಾದ್ಯಂತ ಸ್ಥಾಪನೆ ಮಾಡುವ ಬಗ್ಗೆ ಮಾರ್ಗಸೂಚಿಗಳನ್ನು" 2017 ರಲ್ಲಿ ಹೊರಡಿಸಿದ್ದು, ಸದರಿ ಪುಸ್ತಿಕೆಯ ಪುಟ 27 ರಲ್ಲಿ ಮೈಸೂರು ನಗರ ಮಕ್ಕಳ ವಿಶೇಷ ಪೊಲೀಸ್ ಘಟಕದ ಮಾದರಿ ಬಗ್ಗೆ ಪ್ರಸ್ತಾಪಿಸಿರುವುದರ ಚಿತ್ರ.**



Guidelines for Establishment of

Child Friendly Police Stations

2017

